ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಗ್ರಾಮಾಭಿವೃದ್ಧಿ ಯೋಜನೆ ತಯಾರಿಕೆ ಕಾರ್ಯ ಪ್ರಾರಂಭವಾಗಿದೆ

ಆ) ಹೆಚ್ಚುವರಿಯಾಗಿ ರೂ 1000 00 ಕೋಟಿಗಳು

ಇ) ಪ್ರತಿ ವ್ಯಕ್ತಿಗೆ ಅಂದಾಜು ರೂ 2500 ರಿಂದ 3000 ದವರೆಗೆ ಹೆಚ್ಚುವರಿ ಅನುದಾನ ಒದಗಿಸುವ ಉದ್ದೇಶವನ್ನು ಹೊಂದಿ, ರಾಜ್ಯದ ಒಟ್ಟು ಗ್ರಾಮೀಣ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು, ಆಯಾ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಗೆ ಅನುಗುಣವಾಗಿ ಹಾಗೂ ಡಾ ಡಿ ಎಂ ನಂಜುಂಡಪ್ಪನವರ ಸಮಿತಿಯ ವರದಿಯಲ್ಲಿ ವರ್ಗೀಕರಿಸಿದ ಅತ್ಯಂತ ಹಿಂದುಳಿದ, ಹೆಚ್ಚು ಹಿಂದುಳಿದ, ಹಿಂದುಳಿದ ಮತ್ತು ತುಲನಾತ್ಮಕವಾಗಿ ಮುಂದುವರಿದ ತಾಲ್ಲೂಕುಗಳಿಗೆ ಅನುದಾನ ಹಂಚಿಕೆಯಲ್ಲಿ ಕ್ರಮವಾಗಿ 1 15, 1 10, 1 05 ಮತ್ತು 1 00 ವೇಟೇಜ್ ನೀಡಿ ತಾಲ್ಲೂಕಿನ ಜನಸಂಖ್ಯೆಯನ್ನು ನಿಗದಿಪಡಿಸಲಾಗಿದೆ ಈ ರೀತಿ ನಿಗದಿಪಡಿಸಿದ ಜನಸಂಖ್ಯೆಗೊಳಪಟ್ಟು ಸುಮಾರು 2000 ರಿಂದ 8000 ಜನಸಂಖ್ಯೆಯಿರುವ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ

ಈ) 2007–ಫೆಬ್ರವರಿಯ 4ನೇ ವಾರದಲ್ಲಿ ಆರಂಭಿಸಲು ಉದ್ದೇಶಿಸಲಾಗಿದೆ

983 (590) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು) ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ಹೊಸದಾಗಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೆ,

ಆ) ಹಾಗಿದ್ದಲ್ಲಿ ಎಷ್ಟು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ಮಂಜೂರು ಮಾಡಲಾಗುವುದು,

ಇ) ಲಿಂಗಸಗೂರು ತಾಲ್ಲೂಕಿಗೆ ಮಂಜೂರು ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆಯೇ?

ಶ್ರೀ ಡಿ ಹೆಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಹೌದು

ಆ) 16

ಇ) ಈಗಾಗಲೇ ಎ ಐ ಸಿ ಟಿ ಇ ನವದೆಹಲಿಯು 5 ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು 2002–03ನೇ ಸಾಲಿನಲ್ಲಿಯೇ ಮಂಜೂರಾತಿ ನೀಡಿದ್ದು, ಆಯವ್ಯಯದ ಕೊರತೆಯಿಂದಾಗಿ ಅವುಗಳನ್ನು ಪ್ರಾರಂಭಿಸಿರುವುದಿಲ್ಲ 2007–08ನೇ ಸಾಲಿನಲ್ಲಿ ಈಗಾಗಲೇ ಎ ಐ ಸಿ ಟಿ ಇ ಯಿಂದ ಮಂಜೂರಾಗಿರುವ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಆಯವ್ಯಯದ ಅವಕಾಶವನ್ನು ಮಾಡಿಕೊಂಡು ನಂತರ ಲಿಂಗಸಗೂರು ತಾಲ್ಲೂಕಿಗೆ ಪಾಲಿಟೆಕ್ನಿಕ್ ಮಂಜೂರು ಮಾಡಲು ಎ ಐ ಸಿ ಟಿ ಇ, ನವದೆಹಲಿಯ ಅನುಮೋದನೆ ಪಡೆದ ನಂತರ ಕ್ರಮ ಕೈಗೊಳ್ಳಲಾಗುವುದು

984 (1099) ಶ್ರೀ ಅಂಜನಾಮೂರ್ತಿ (ನೆಲಮಂಗಲ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) 2006–07ನೇ ಸಾಲಿನಲ್ಲಿ ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಎಷ್ಟು ಗ್ರಾಮಗಳಿಗೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಹಣ ಖರ್ಚಾಗಿರುತ್ತದೆ,

ಆ) ಬಿಡುಗಡೆಯಾಗಿರುವ ಮೊತ್ತವೆಷ್ಟು?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) 2006–07ನೇ ಸಾಲಿನಲ್ಲಿ ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಚಾಮುಂಡೇಶ್ವರಿ ಮತ ಕ್ಷೇತ್ರಕ್ಕೆ 124 ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಕುಡಿಯುವ ನೀರು ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ

ಆ) 2006–07ನೇ ಸಾಲಿನಲ್ಲಿ ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಬಿಡುಗಡೆಯಾದ ಮೊತ್ತ ರೂ 550 00 ಲಕ್ಷಗಳು

985 (1181) ಶ್ರೀ ಆಂಜನೇಯ ಹೆಚ್ (ಭರಮಸಾಗರ) ಮಾನ್ಯ ಶ್ರೀ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿ ಯಾವಾಗ ಪ್ರಾರಂಭವಾಗುವುದು,

ಆ) ಈ ಯೋಜನೆಗೆ ಮೀಸಲಿಟ್ಟಿರುವ ಹಣ ಎಷ್ಟು,